

# ಕಪ್ಪು–ಬಿಳುಪು ಜೋಡಿ

ರಾಧಿಕಾ ಆಪ್ಟೆ ಮತ್ತು ನವಾಜುದ್ದೀನ್ ಸಿದ್ದಿಖಿ ಬಾಲಿವುಡ್‌ನಲ್ಲಿರುವ ಅತ್ಯಂತ ಪ್ರತಿಭಾವಂತ ನಟಿ– ನಟರು. ಸಿದ್ದಿಖಿಯ ಸೌಂದರ್ಯ ನೋಡಿ ಯಾರೂ ಈವರೆಗೆ ಆತನಿಗೆ ಪಾತ್ರ ಕೊಟ್ಟಿಲ್ಲ. ಪ್ರತಿಯೊಂದು ಸಿನಿಮಾ ಕೂಡಾ ಆತ ತನ್ನ ಅಭಿನಯ ಪ್ರತಿಭೆಯಿಂದಲೇ ಗಳಿಸಿದ್ದು. ‘ಬಾಲಿವುಡ್‌ನಲ್ಲಿ ಕಪ್ಪಗಿರುವ ನನ್ನಂಥ ಹೀರೊಗೆ ಸುಂದರ ಬೆಳ್ಳಗಿನ ಹುಡುಗಿಯರನ್ನು ಹೀರೊಯಿನ್ ಆಗಿ ಯಾರೂ ಏಕೆ ಆಯ್ಕೆ ಮಾಡುತ್ತಿಲ್ಲ?’ ಎಂದು ಇತ್ತೀಚೆಗೆ ಸಿದ್ದಿಖಿ ಪ್ರಶ್ನೆ ಕೇಳಿದ್ದುಂಟು. ಹಾಗೆ ನೋಡಿದರೆ ರಾಧಿಕಾ ಆಪ್ಟೆ ಬೆಳ್ಳಗಿನ ಹುಡುಗಿಯೇ. ಸೌಂದರ್ಯ ಮತ್ತು ಪ್ರತಿಭೆ ಎರಡೂ ಹದವಾಗಿ ಮೇಳೈಸಿರುವ ನಟಿಯೀಕೆ.

ಸಿದ್ದಿಖಿ ಮತ್ತು ರಾಧಿಕಾಳ ‘ಬ್ಲ್ಯಾಕ್ ಅಂಡ್ ವೈಟ್’ ಜೋಡಿ ಬಾಲಿವುಡ್ ಯಶಸ್ವಿ ಜೋಡಿಗಳಲ್ಲಿ ಒಂದು. ‘ಬದ್ಲಾಪುರ್’ ಮತ್ತು ‘ಮಾಂಜಿ: ದಿ ಮೌಂಟೆನ್ ಮ್ಯಾನ್’ ಚಿತ್ರಗಳಲ್ಲಿ ಈ ಜೋಡಿಯ ಅಭಿನಯ ಪ್ರೇಕ್ಷಕರು ಮಾತ್ರವಲ್ಲ, ವಿಮರ್ಶಕರನ್ನೂ ಬಲವಾಗಿ ತಟ್ಟಿದೆ. ಈಗ ಈ ಜೋಡಿ ಇನ್ನೊಂದು ಹೊಸ ಚಿತ್ರ ‘ರಾತ್ ಅಖೇಲಿ ಹೈ’ದಲ್ಲಿ ಕಾಣಿಸಿಕೊಂಡಿದೆ.

‘ಸಿದ್ದಿಖಿ ಅದ್ಭುತ ನಟ. ಅವರ ಎದುರಿಗೆ ನಟಿಸುವಾಗ ನಾವು ಸಾಕಷ್ಟು ಕಲಿಯಲು ಸಿಗುತ್ತದೆ. ನಮ್ಮ ನಟನೆಯೂ ಪುಟಕ್ಕಿಟ್ಟ ಚಿನ್ನವಾಗುತ್ತದೆ. ಆತನ ಜೊತೆಗೆ ನಟಿಸೋದು ಅಂದ್ರೆ ನಂಗೆ ತುಂಬ ಇಷ್ಟ’ ಎಂದಿದ್ದಾಳೆ ರಾಧಿಕಾ. ಆಕೆ ಆಯುಷ್ಮಾನ್ ಖುರಾನಾ ಜೊತೆಗೆ ನಟಿಸಿದ ‘ಅಂಧಾಧುನ್’ ಸೂಪರ್‌ಹಿಟ್ ಆಗಿ ಬೇರೆ ಭಾಷೆಗಳಿಗೂ ಹೋಗಿದೆ. ‘ರಾತ್ ಅಖೇಲಿ ಹೈ’ನಲ್ಲಿ ನಟಿಸಿದ ಬೆನ್ನಲ್ಲೇ ಆಕೆಗೆ ಹಾಲಿವುಡ್‌ನಿಂದಲೂ ಕರೆ ಬಂದಿದೆ. ‘ಲಿಬರ್ಟ್’ ಎನ್ನುವ ಹಾಲಿವುಡ್ ಸಿನಿಮಾದಲ್ಲಿ ಆಕೆ ನಟಿಸುತ್ತಿರುವುದು ಬಾಲಿವುಡ್‌ನ ದೊಡ್ಡ ಸುದ್ದಿ.



■ ಬಿಂದು


